ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) ಅವರು : 1983ರ ಕರ್ನಾಟಕ ಶಿಕ್ಷಣ ಅಧಿನಿಯಮ (1995ರ ಕರ್ನಾಟಕ ಅಧಿನಿಯಮ-1) 145(4) ರ ಪ್ರಕರಣದ ಮೇರೆಗೆ :

1. 1998ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಮೇಲ್ಮನವಿ, ಪರಿಷ್ಕರಣೆ ಮತ್ತು ಪರಿಶೀಲನೆ) ನಿಯಮಗಳ ನಿಯಮ 3ಕ್ಕೆ ತಿದ್ದುಪಡಿ ಹಾಗೂ ವಿವಿಧ ಹಂತದ ಶಿಕ್ಷಣ ಸಂಸ್ಥೆಗಳ ಪ್ರಾಧಿಕಾರಕ್ಕೆ ಸಕ್ಷಮ ಪ್ರಾಧಿಕಾರವನ್ನು ನೀಡಿ ದಿನಾಂಕ 28.04.2006 ರಂದು ಹೊರಡಿಸಲಾದ ಇಡಿ 54 ವಿವಿಧ 2005ನೇ ಸಂಖ್ಯೆಯ ಅಧಿಸೂಚನೆ.

2. 1998ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಮೇಲ್ಮನವಿ, ಪರಿಷ್ಕರಣೆ ಮತ್ತು ಪರಿಶೀಲನೆ) ನಿಯಮಗಳಿಗೆ ತಿದ್ದುಪಡಿ ಮಾಡಿ ವಿವಿಧ ಪ್ರವರ್ಗಗಳ ಶಿಕ್ಷಣ ಸಂಸ್ಥೆಯ ಅಧಿಕಾರಿಗಳಿಗೆ ನಿಯೋಜಿತ ಅಧಿಕಾರವನ್ನು ನೀಡಿಯುವುದಕ್ಕೆ ಸಂಬಂಧಿಸಿದಂತೆ ದಿನಾಂಕ 22.11.2005 ರಂದು ಹೊರಡಿಸಲಾದ ಇಡಿ 54 ವಿವಿಧ 2005 ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

ಎರಡನೇ ಪಟ್ಟಿಯ ರೀತ್ಯಾ

I ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ಅವರ ಪರವಾಗಿ ಶ್ರೀ ಬಿ.ಎಸ್. ಯಡಿಯೂರಪ್ಪ

II ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) ಅವರ ಪರವಾಗಿ ಶ್ರೀ ಬಿ.ಎಸ್. ಯಡಿಯೂರಪ್ಪ

III ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) ಅವರ ಪರವಾಗಿ ಶ್ರೀ ಬಿ.ಎಸ್. ಯಡಿಯೂರಪ್ಪ

IV ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) ಅವರ ಪರವಾಗಿ ಶ್ರೀ ಬಿ.ಎಸ್. ಯಡಿಯೂರಪ್ಪ

V ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಅವರ ನನ್ನ ಹೆಸರಿನ ಮುಂದಿರುವ ಪಟ್ಟಿಯನ್ನು ಮಂಡಿಸುತ್ತೇನೆ.

VI ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) ಅವರ ನನ್ನ ಹೆಸರಿನ ಮುಂದಿರುವ ಪಟ್ಟಿಯನ್ನು ಮಂಡಿಸುತ್ತೇನೆ.

VII ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) ಅವರ ಪರವಾಗಿ ಶ್ರೀ ಬಿ.ಎಸ್. ಯಡಿಯೂರಪ್ಪ

VIII ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) ಅವರ ಪರವಾಗಿ ಶ್ರೀ ಬಿ.ಎಸ್. ಯಡಿಯೂರಪ್ಪ.

IX ಶ್ರೀ ಶಿವಾನಂದ ಎನ್. ನಾಯಕ್ (ಸಣ್ಣ ಕೈಗಾರಿಕೆಗಳ ಸಚಿವರು) ಅವರ ಪರವಾಗಿ ಶ್ರೀ ಬಿ.ಎಸ್. ಯಡಿಯೂರಪ್ಪ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ತಮ್ಮ ಕೊಠಡಿಯಲ್ಲಿ ಹಾಗೂ ಸದನದ ಕಾರ್ಯಕಲಾಪಗಳ ಸಮಿತಿಯಲ್ಲಿ ನಿರ್ಧಾರವಾದಂತೆ, ಈ ಹಕ್ಕುಚ್ಯುತಿಯ ಬಗ್ಗೆ ಕೇವಲ ಅನುಸಾಂಗಿಕವಾಗಿ ಚರ್ಚೆ

ಮಾಡಿ ತಮ್ಮ ವಿವೇಚನೆಯ ಮೂಲಕ ಕೊಡುವ ತೀರ್ಮಾನಕ್ಕೆ ಬದ್ಧರಾಗಬೇಕು ಎಂದು ತೀರ್ಮಾನ ಮಾಡಿದ್ದೆವು. ಆದರೆ ಮಾನ್ಯ ರಾಯರೆಡ್ಡಿಯವರು ಈ ಅವಕಾಶವನ್ನು ಉಪಯೋಗಿಸಿಕೊಂಡು ಬಹಳ ದೀರ್ಘವಾಗಿ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಮಾತನಾಡುವ ಹಕ್ಕಿದೆ, ಮಾತನಾಡಿದ್ದಾರೆ. ಅದರ ಬಗ್ಗೆ ಭಿನ್ನಾಭಿಪ್ರಾಯ ಏನೂ ಇಲ್ಲ. ಆದರೆ ಒಪ್ಪಂದದ ಪ್ರಕಾರ ನಾವು ನಡೆದುಕೊಳ್ಳಬೇಕಾಗಿತ್ತು ಎಂದು ಮಾತ್ರ ಹೇಳಲು ಬಯಸುತ್ತೇನೆ. ಸೌಜನ್ಯಕ್ಕಾದರೂ ಸರ್ಕಾರ ನಮ್ಮೊಡನೆ ಸಮಾಲೋಚಿಸಬೇಕಿತ್ತು ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಮೂರು ಜನ ಹಿರಿಯ ಸದಸ್ಯರು ಮಾತನಾಡುವ ಸಂದರ್ಭದಲ್ಲಿ ಕೂಡ ಅದನ್ನು ಹೇಳಿದರು. ಮತ್ತೊಂದು ಕಡೆಗೆ ಸೌಜನ್ಯದಿಂದ ಜಿಲ್ಲಾಧಿಕಾರಿಗಳು ಇಂತಹ ಏರ್ಪಾಡುಗಳನ್ನು ಮಾಡಿದ್ದೇವೆ ಎಂದು ಹೇಳಿದರೆ, ಬೆಳಗಾವಿ ಉಸ್ತುವಾರಿ ಸಚಿವರು ಸೌಜನ್ಯಕ್ಕಾಗಿ ಒಂದು ಪೂರ್ವಭಾವಿ ಸಭೆಯನ್ನು ಕರೆದಿದ್ದೇನೆ ಎಂದು ಹೇಳಿದರೆ, ಅದನ್ನು ಸಂವಿಧಾನ ಬಾಹಿರ ಕ್ರಮ ಎಂದು ಹೇಳುವುದಾದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. It is something like a pernicious argument ಎಂದು ಹೇಳಬೇಕಾಗುತ್ತದೆ.

3. ವಿತ್ತೀಯ ಕಾರ್ಯಕಲಾಪಗಳು:

2006-07ನೇ ಸಾಲಿನ ಪೂರಕ ಅಂದಾಜು (ಒಂದನೇ ಕಂತು) ಮಂಡನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ದಿನಾಂಕ 31.03.2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1ರಿಂದ 5, 7ರಿಂದ 15, 17ರಿಂದ 24 ಹಾಗೂ 26ರಿಂದ 28ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಈ ಬಂಡವಾಳ ಖಾತೆಯಲ್ಲಿ ಮಂಜೂರಾದ ಮತ್ತು ಅದನ್ನು ಭರಿಸಲು ಪೂರಕ ಅಂದಾಜುಗಳಲ್ಲಿ ಸೇರಿಸಲಾದ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಲಾದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಅಧ್ಯಕ್ಷರು : ವಿವರಣೆ ನೀಡಿ.

ಶ್ರೀ ಜೆ.ಎ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ಅದಕ್ಕೂ ಮೊದಲು ನಮ್ಮದು ಒಂದು ಹಕ್ಕುಚ್ಯುತಿ ಪ್ರಸ್ತಾವ ಇದೆ.

4. ಹಕ್ಕುಚ್ಯುತಿ ಪ್ರಸ್ತಾವ

ವಿಷಯ: ಬೆಳಗಾವಿ ಅಧಿವೇಶನದ ಬಗ್ಗೆ.

ಶ್ರೀ ಜೆ.ಎ. ಶ್ರೀರಾಮರೆಡ್ಡಿ : Privilege Motion ಹಾಗೆಯೇ ಇಟ್ಟುಕೊಂಡು ಎಲ್ಲಾ ಕಾರ್ಯಕಲಾಪ ಪ್ರಾರಂಭ ಮಾಡಿದರೆ ಹೇಗೆ?